Doc-14.
T-P-2

(1)

R No KRNN 12

1-2-1975

58 th Year ನೇ ವರ್ಷ

ಸ್ವರಾಜ್ಯ ಮುಡಿಕೋಸ್ಕರ ನಿರಂತರವಾಗಿ ಕಷ್ಟಪಟ್ಟ

# ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಕುಪ್ಪಯ್ಯ  ಸಂಪಾದಕರು ಧರ್ಮಸಿ ಚಾರಿವಂಶ ಎಂ ಎಸ್ ಕೃಷ್ಣ ಚಾರ್  3 ಕ್ಕೆ

## ಕರ್ನೂಲಿನಲ್ಲಿ ಬೆಲೆ ಏರಿಕೆಗೆ ಪ್ರತಿಭಟನೆ

ಬಳಕೆದಾರರಿಗೆ
ಇದೊಂದು ಸಂತಸದ ಸುದ್ದಿ

★

ನಗರದಲ್ಲಿ ಇನ್ನೊಂದು ಜನತಾ ಬಜಾರ್ ಪ್ರಾರಂಭ

ಸಯ್ಯಾಜಿರಾವ್ ರಸ್ತೆಯಲ್ಲಿರುವ
ಮೋತಿಖಾನೆ ಕಟ್ಟಡದಲ್ಲಿ ನಮ್ಮ
ಎರಡನೇ ಜನತಾ ಬಜಾರ್ ಅನ್ನು
ಪ್ರಾರಂಭಿಸುತ್ತಿದ್ದೇವೆ

ಕೇಂದ್ರ ಕಂಪ್ಯಾರದ ಭಾರಿ ಕೈಗಾರಿಕೆ ಮತ್ತು ನಾಗರೀಕ
ಸರಬರಾಜು ಸಚಿವರಾದ ಶ್ರೀ ಟಿ. ಎ. ಪೈ ಅವರು
ಫೆಬ್ರವರಿ 3 ರಂದು ಸಂಜೆ 5 ಗಂಟೆಗೆ ಉದ್ಘಾಟಿಸುವರು

ರಾಷ್ಟ್ರೀಯ ಸಹಕಾರ ಬಳಕೆದಾರರ ಮಹಾಸಂಘದ ಅಧ್ಯಕ್ಷರಾದ
ಶ್ರೀ ವಿ. ಬಿ. ತರೋಡೇಕರ್ ( ಸಂಸತ್ ಸದಸ್ಯರು ) ಅವರು
ಸಮಾರಂಭದ ಅಧ್ಯಕ್ಷತೆ ವಹಿಸುವರು.

ನ್ಯಾಯ ಬೆಲೆ : ಉತ್ತಮ ಗುಣಮಟ್ಟ

ನಿಮ್ಮ ಎಲ್ಲ ಬೇಡಿಕೆಗಳಿಗೆ ನಮ್ಮಲ್ಲಿಗೆ ಇಂದೇ ಭೇಟಿ ಕೊಡಿ

ಅಧ್ಯಕ್ಷರು ಮತ್ತು ಡೈರಕ್ಟರುಗಳ ಮಂಡಳಿ
ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಭಗಟು ಮಳಿಗೆ
ಹೊಸ ಸಂತೇಪೇಟೆ, ಮೈಸೂರು

[ ad–venture ]  ಫೋನ್ : 23094

### ಭಾರತದ ಬಗ್ಗೆ ಟೀಕೆ

ನವದೆಹಲಿ— ನಂಬಿದರೆ ನಂಬಿ, ಬಿಟ್ಟರೆ ಬಿಡಿ, ಭಾರತದ 548 ಮಿ. ಜನಸಂಖ್ಯೆಯಲ್ಲಿ 338 ಮಿಲಿಯ "ಅಧೀನ ಜನರು" ಆಗಿರುವುದರಿಂದ, ಭಾರತವು ಇಂದಿನ ಎರಡು ದೊಡ್ಡ ರಾಜಕೀಯ ದೇಶವಾಗಿದೆ ಎಂದು ಅಮೇರಿಕಾದ "ಸ್ವಾತಂತ್ರ್ಯ ಭವನ" ಸಂಸ್ಥೆ ಅಭಿಪ್ರಾಯ ಪಟ್ಟಿದೆ – ಅದರ ಹೇಳಿಕೆಯಲ್ಲಿ ಮತ್ತೊಂದು ರಾಷ್ಟ್ರ ಸಾರ್ವಭೌಮತ್ವವಿರುವ ದೇಶ ರಷ್ಯಾ.

### ಕಳ್ಳಸಾಗಾಣಿಕೆ ತಪ್ಪಿಸಲು

ಬೆಂಗಳೂರು— ರಾಜ್ಯದ ಗಡಿ ಮೂಲಕ ಧಾನ್ಯ ಕಳ್ಳಸಾಗಾಣಿಕೆ ತಪ್ಪಿಸಲು ಕ್ರಮ ತೀವ್ರಗೊಳಿಸಲಾಗಿದೆಯೆನ್ನಲಾಗಿದೆ.

★

### ರಾಗಿ ಜೋಳ ವಶ

ಬೆಂಗಳೂರು— ತಮಿಳುನಾಡಿಗೆ ಕಳ್ಳಸಾಗಾಣಿಕೆಯಾಗುತ್ತಿದ್ದ 90 ಚೀಲ ರಾಗಿ ಮತ್ತು ಚೀಲ ಜೋಳವನ್ನು ಸಿವಿಡಿ ಅಹಾರ ಶಾಖೆಯವರು ವಶಪಡಿಸಿಕೊಂಡರು.

★

### ಜಯಪ್ರಕಾಶರ ದರ್ಶನ

ಬೆಂಗಳೂರು— ಶ್ರೀ ಜಯಪ್ರಕಾಶ ನಾರಾಯಣರನ್ನು ದರ್ಶನ ಮಾಡುವುದು ಕಾಂಗ್ರೆಸ್ಸಿಗೆ ಅಷ್ಟಹಷ್ಟಕಾರಿಯೆಂದೂ, ಇದರಿಂದ ಜಳವಳವು ಇನ್ನೂ ತೀವ್ರಗೊಳ್ಳುವುದೆಂದೂ ಜನಸಂಘದ ಅಧ್ಯಕ್ಷ ಶ್ರೀ ಎಲ್ ಕೆ ಆಡ್ವಾಣಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

★

### ಭೂಕಂಪದ ಹಾವಳಿ

ಕಿನೌರ್— ಹಿಮಾಚಲ ಪ್ರದೇಶದಲ್ಲಿ ಜ. 19 ರಲ್ಲಿ ಆದ ಭೂಕಂಪದಿಂದ ೀ ಗ್ರಾಮದಲ್ಲಿ ಕೇವಡ 90 ಕಟ್ಟಡಗಳು ನ ಷ್ಟಗೊಂಡವು ಅಥವಾ ನಾಶವಾದವು

★

### ದಿನ್ಯವಾಣಿ

ಗಣರಾಜ್ಯ ರೀತಿಯ ಸರಕಾರವು, ಅತ್ಯುನ್ನತ ರೀತಿಯ ಸರಕಾರವಾಗಿದೆ ; ಆದರೆ ಇದಕ್ಕಾಗಿ ಅತ್ಯುನ್ನತ ರೀತಿಯ ಮಾನವೀಯ ಸ್ವಭಾವ ಅವಶ್ಯಕವಾಗಿದೆ, ಅಂತಹದು ಪ್ರಸ್ತುತ ಎಲ್ಲೂ ಇಲ್ಲ – ಪೈನ್ಸರ್

●

### ಕ್ರೀಡಾಂಗಣ

ಹುಂಡ್ಲಿ ನಗರದಲ್ಲಿ ರೂ. 10 ಲಕ್ಷ ವೆಚ್ಚದಲ್ಲಿ ಕ್ರೀಡಾಂಗಣ ಶಂಕುಸ್ಥಾಪನೆ ನೆರವೇರುವುದು.

### ಪ್ರತಿಭಟನೆ

ಅವಶ್ಯ ವಸ್ತುಗಳ ಏರುತ್ತಿರುವ ಬೆಲೆ ಮತ್ತು ಹೊಟೇಲಿನವರು ತಿಂಡಿ ಬೆಲೆ ಹೆಚ್ಚಿಸಿರುವುದನ್ನು ಪ್ರತಿಭಟಿಸಿ ಶುಕ್ರವಾರ ಕರ್ನೂಲಿನಲ್ಲಿ ಪ್ರತಿಭಟನಾ ಹರತಾಳ ನಡೆಸಲಾಯಿತು ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು

●

### ದೇವರಸ್ ಹೇಳಿಕೆ

ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರತಿಬಂಧಿಸುವ ಯೋಜನೆಯ ಬಗ್ಗೆ ಸಂಘಕ್ಕೆ ತಿಳಿಸಿಲ್ಲವೆಂದು ಅವನ್ನು ತನ್ನ ಶಕ್ತಿಯಿಂದ ಎದುರಿಸುವುದೆಂದು ಸಂಘದ ನಾಯಕ ಶ್ರೀ ಬಾಳಾ ಸಾಹೆಬ್ ದೇವರಸ್ ಲಕ್ನೋದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು

●

### ಸುಗ್ರೀವಾಜ್ಞೆ

ಗ್ರಾಹಕ ಸಂಘಟನೆಗಳ ಯಾಚನೆಗಳು ಮತ್ತೆ ಸುಗ್ರೀವಾಜ್ಞೆಯಿಂದ ಮುಕ್ತಿಗೆ ಹಾಕಲ್ಪಟ್ಟಿತೆಂದು ಬೆಂಗಳೂರು ವರದಿ ತಿಳಿಸುತ್ತದೆ.

●

### ತ್ರಿಪಕ್ಷ ಸಮಿತಿ ರಚನೆಗೆ ಕರೆ

ಬೆಂಗಳೂರಿನಲ್ಲಿ ಸಮಾವೇಶ ಆಗಿದ್ದ ಅಖಿಲ ಭಾರತ ಬೀಡಿ ಸಮ್ಮೇಳನದಲ್ಲಿ, ಬೀಡಿ ಕೈಗಾರಿಕೆ ಸಮಸ್ಯೆ ಪರಿಹರಿಸಲು ತ್ರಿಪಕ್ಷ ಸಮಿತಿ ನೇಮಿಸಲು ಒತ್ತಾಯ ಮಾಡಲಾಯಿತು.

●

### ಉದ್ಘಾಟನೆ

ಕರ್ನಾಟಕ ಸ್ಕೂಟರು ಯಂತ್ರಾಗಾರಕ್ಕೆ ಶಂಕುಸ್ಥಾಪನೆ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರ ಅಧ್ಯಕ್ಷತೆಯಲ್ಲಿ ಕೇಂದ್ರ ಮಂತ್ರಿ ಶ್ರೀ ಟಿ ಎ ಪೈರವರಿಂದ ಭಾನುವಾರ ನೆರವೇರಿಸಲ್ಪಡುವುದೆಂದು ಮುಂಚೆ ವಾರ್ತೆ.

2



### ಜಯಪ್ರಕಾಶರ ಪಕ್ಷಗಿರಿಯೆ ?

ನವದೆಹಲಿ— ಬೀಹಾರು ಚಳುವಳಿಯು ಶಾಂತಿಯುತವಾಗಿರ್ಪಡಿಸುವುದರಿಂದ ಚಳುವಳಿ ನಾಯಕರ ಮೇಲೆ ತೀವ್ರ ಕ್ರಮ ಕೈಗೊಳ್ಳಲಾಗುವುದೆಂದು ಬಿ ೧ ಹಾ ರು ನುಳ್ಳು ಮಂತ್ರಿ ಗಫೂರರು ಬೆದರಿಕೆ ಹಾಕಿರುವರು – ಜಯಪ್ರಕಾಶನಾರಾಯಣರ್ ಉತ್ತರ ಪ್ರದೇಶ ಪ್ರವಾಸದಿಂದ ಬೀಹಾರಿಗೆ ವಾಪಸ್ಸಾದನಂತರ ದಸ್ತಗಿರಿ ಮಾಡಲಾಗುವುದೆನ್ನಲಾಗಿದೆ.

### ಒಂದು ಪಾರಿವಾಳದ ರಕ್ಷಣೆಗಾಗಿ

ಬೊಂಬಾಯಿ— ಗಲಾಟೆಯ ಕೋಟೆ ಭಾಗದಲ್ಲಿನ ದಾದಾಭ್ಯಾ ನೌರೋಜಿ ರಸ್ತೆಯಲ್ಲಿ ಒಂದು ಅಪರೂಪದ ಗೋಲ್ಡ್ ಮೊಹರ್ ಮರದ ಮೇಲಿನ ಒಂದು ಕೊಂಬೆಗೆ ಒಂದು ಗಾಳಿಪಟ ಮತ್ತು ಪಟದದಾರ ಸಿಕ್ಕಿಕೊಂಡಿತ್ತು. ಆ ಅತ್ತ ಕಡೆ ಹಾರಿ ಬರುತ್ತಿದ್ದ ಒಂದು ಪಾರಿವಾಳದಕಕ್ಕೆ ಈ ದಾರದಲ್ಲಿ ಸಿಕ್ಕಿಕೊಂಡು ಸಂಕಟಕ್ಕೀಡಾಯಿತು – ಅದನ್ನು ನೋಡುತ್ತಾ ಜನರು ಗುಂಪುಗುಂಪಾಗಿ ಸೇರಿದರು – ಅಲ್ಲಿ ಓಡಾಡುತ್ತಿದ್ದ ನೂರಾರು ಬಸ್ಸುಗಳೂ ಕಾರುಗಳೂ ನಿಲ್ಲಸಗೊಂಡವು – ಪಾರಿವಾಳವನ್ನು ರಕ್ಷಿಸಲು 3 ಫೈರ್ ಇಂಜನ್ನುಗಳು ಬಂದವು – ಆದರೆ ಅ ಸ್ಥಳಕ್ಕೆ ಎ ಟ ಕ ಲು ಏಣಿ ಉದ್ದ ಸಾಲಲಿಲ್ಲ – ಕಡೆಗೆ ಮತ್ತೊಂದು ಏಣಿ ಸೇರಿಸಿ ಪಾರಿವಾಳವನ್ನು ಕೆಳಗೆ ತರಲಾಯಿತು – ಈ ನಾಟಕವೆಲ್ಲಾ 2 ಗಂಟೆ ನಡೆಯಿತು.

### ಬೇಕಾದಷ್ಟು ವಜ್ರ

ನವದೆಹಲಿ— ಭಾರಿ ಸ್ಫೋಟಕಗಳನ್ನು ಪ್ರಯೋಗಿಸಿ ಸಾಧಾರಣ ಕಲ್ಲನ್ನು ವಜ್ರವನ್ನಾಗಿ ಮಾಡುವದನ್ನು ಕನಪುರದ ವಿಜ್ಞಾನಿಗಳು ಕಂಡುಹಿಡಿದಿರುವರು.

★ ಲಂಡನ್—ಪ್ರಾಜೆಕ್ಟೇತರ ಸಾಲವಾಗಿ ಬ್ರಿಟನ್ನು ಭಾರತಕ್ಕೆ ಬಡ್ಡಿ ಇಲ್ಲದ ರೂ. 36 ಕೋಟಿ ಸಾಲಾ ಕೊಡಲದೆ.


# Remember

You are quite safe in your dealings with

## Bank Road Bahusar

Firm Noted for Genuine Good Business

# SHAKTI SUDHA

A Superb Tonic

Quality Printing Neat Binding

## Lakshminarasimha Press



# ವುಡ್‌ಲಾಂಡ್ 31 I 75 ರಿಂದ

## ಅಮೋಘ 2 ನೇ ವಾರ

## ಮಿಸ್ಟರ್ ರೋಮಿಯೋ

ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಪಾತ್ರ– ಶಶಿಕಪೂರ್, ರಿಂಕು ಜೈಸಾಲ್, ದಿನ ೧೧ ಪ್ರದರ್ಶನಗಳು

# ಅಪೆರಾ 31 I 75 ರಿಂದ

ಸಹಸ್ರ ಶಿರಚ್ಛೇದ

## ಅಪೂರ್ವ ಚಿಂತಾಮಣಿ

ಅಮೋಘ ಕನ್ನಡ ಚಿತ್ರ

ದಿನ 3 ಪ್ರದರ್ಶನಗಳು

# ಭಾರತದಲ್ಲಿ ಗೋವಧೆ

## ಪೂರ್ಣ ನಿಶೇಧವಾಗಲಿ

## Protect the Cow

# Help The Gorakshana

—Humanitarian Propoganda Monthly—


Edited Printed and Published by Dharmapracharanirata M S. Krishna Rao ( Proprietor ) at the Satvaadi Press, Chamara